ಕರ್ನಾಟಕ ವಿಧಾನ ಸಭೆ

ಸೋಮವಾರ 30ನೇ ಡಿಸೆಂಬರ್ 2002ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10.50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ.ವೆಂಕಟಪ್ಪರವರು)

ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ಸಭಾಧ್ಯಕ್ಷರು:

ವಿಧಾನಸಭೆ ಮಾಜಿ ಸದಸ್ಯರಾದ ಶ್ರೀ ಅಣ್ಣಾಬಾಲಾಜಿ ಬೇಡಗೆ ಇವರು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಶ್ರೀ ಅಣ್ಣಾ ಬಾಲಾಜಿ ಬೇಡಗೆ

ವಿಧಾನಸಭೆ ಮಾಜಿ ಸದಸ್ಯರಾದ ಶ್ರೀ ಅಣ್ಣಾ ಬಾಲಾಜಿ ಬೇಡಗೆ ಅವರು 8ನೇ ಆಗಸ್ಟ್, 1920 ರಲ್ಲಿ ಬೆಳಗಾಂ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಬೆಡಕಿಹಾಳ ಗ್ರಾಮದಲ್ಲಿ ಜನಿಸಿದ್ದರು. ಶ್ರೀಯುತರು ಬೆಡಕಿಹಾಳ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣ ಬೆಳೆಯಲು ಶ್ರಮಿಸಿದರು. ಶ್ರೀಯುತರು ಆರನೆಯ ವಿಧಾನಸಭೆಗೆ ಸಡಲ್‌ಗಾ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದರು.

ಶ್ರೀಯುತರು ದಿನಾಂಕ 10ನೇ ನವೆಂಬರ್, 2002ರಂದು ನಿಧನ ಹೊಂದಿದರು. ದಿವಂಗತರಾದ ಶ್ರೀ ಅಣ್ಣಾ ಬಾಲಾಜಿ ಬೇಡಗೆ ರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ

(ಮೃತರ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು).

ಅಧ್ಯಕ್ಷರು:- ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಎರಡನೇ ಕಾರ್ಯಕಲಾಪ ನಿನ್ನೆಯ ಚರ್ಚೆಯನ್ನು ಮುಂದುವರಿಸುವುದು.

2.ಅಧ್ಯಕ್ಷರ ಅಪ್ಪಣೆ ಮೇರೆಗೆ

ರೇಷ್ಮೆ ಗೂಡಿನದರ ಕುಸಿದಿರುವುದು ಹಾಗೂ ರಾಜ್ಯದ ವಿದ್ಯುತ್ ಸರಬರಾಜಿನ ಬಗ್ಗೆ.

+ಶ್ರೀ ಸಿ.ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೆ, ಇವತ್ತು ಚರ್ಚೆ ಆರಂಭ ಮಾಡುವುದಕ್ಕಿಂತಲೂ ಮೊದಲು ನಾನು ಪ್ರಸ್ತಾಪ ಮಾಡತಕ್ಕಂಥ ಒಂದೆರಡು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿರತಕ್ಕಂಥದ್ದು, ಸಭೆಯ ಗಮನಕ್ಕೆ ತರಬೇಕಾಗಿರತಕ್ಕಂಥ, ಅವಶ್ಯಕತೆ ಇದೆಯೆಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಗಮನಿಸಬೇಕು. ತಾವು ಆ ಕಡೆಗೆ ನೋಡಿದರೆ ಆಗುವುದಿಲ್ಲ. ಇದಕ್ಕೆ ತಾವೇ ತೀರ್ಮಾನ ತೆಗೆದುಕೊಳ್ಳಬೇಕು. ಮೊದಲನೆಯದಾಗಿ ರೇಷ್ಮೆ ಗೂಡಿನ ವಿಚಾರದಲ್ಲಿ, ಇನ್ನು ರೈತರು ತಡೆಯುವಂಥ ಹಂತದಲ್ಲಿ

ಇಲ್ಲ. ಆ ಹಂತವೆಲ್ಲಾ ಮುಗಿದುಹೋಗಿಬಿಟ್ಟಿದೆ. 40 ರೂಪಾಯಿ, 50 ರೂಪಾಯಿಗೆ ಒಂದು ಕೆ.ಜಿ.ರೇಷ್ಮೆ ಗೂಡನ್ನು ಮಾರಾಟ ಮಾಡುತ್ತಿದ್ದಾರೆ. ಹಿಂದೆ ಎಲ್ಲಾನೂ ಕೂಡ, ನಮ್ಮನ್ನೆಲ್ಲಾ ಕರೆದುಕೊಂಡು ಮಾನ್ಯ ಪ್ರಧಾನಮಂತ್ರಿಗಳ ವರೆಗೆ ಕೂಡ ಹೋಗಿ ಬಂದಿರಿ. ಆವತ್ತು ಅಂದುಕೊಂಡಿದ್ದದ್ದು ಏನೆಂದರೆ, ಒಂದು ಕೆ.ಜಿ.ಗೂಡಿಗೆ 120 ರೂಪಾಯಿ ದರ ನಿಗದಿಪಡಿಸುತ್ತೀರಿ ಎನ್ನತಕ್ಕಂಥ ನಂಬಿಕೆಯನ್ನು ನಾವು ಇಟ್ಟುಕೊಂಡಿದ್ದೆವು. ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ತಮಗೂ ಸಹ ಸಂಬಂಧ ಇದೆ. 5 ರೂಪಾಯಿ, 5ರೂಪಾಯಿ ಹೀಗೆ 10 ರೂಪಾಯಿ ಮಾತ್ರ ಮಾರಾಟದ ಬೆಲೆ ಮೇಲೆ ಕೊಡತಕ್ಕಂಥದ್ದು, ಅದನ್ನೂ ಕೂಡ ಒಂದೆರಡು ತಿಂಗಳುಗಳಲ್ಲಿ ಮಾತ್ರ ಕೊಟ್ಟರು, ಆ ಮೇಲೆ ಹಣವನ್ನು ಕೂಡ ಇವತ್ತಿನ ದಿವಸ ಕೊಡುತ್ತಿಲ್ಲ. ಅದು ನಿಂತುಹೋಗಿದೆ. ಇವತ್ತಿನ ದಿವಸ ಕೆ.ಜಿ.ಒಂದಕ್ಕೆ 40-50 ರೂಪಾಯಿಗೆ ರೇಷ್ಮೆ ಗೂಡು ಮಾರಾಟವಾದರೆ ಅದನ್ನು ಬೆಳೆಯತಕ್ಕಂಥ ರೈತನ ಸ್ಥಿತಿ ಏನಾಗಬೇಕು? ಇದರಿಂದ ಇವತ್ತಿನ ದಿವಸ ಏನಾಗಬಹುದು? ವೈಯಕ್ತಿಕವಾಗಿ ನಾವು ಕುಸಿದು ಬೀಳುವ ಹಾಗೆ ಆಗುತ್ತಿದ್ದು ನಿಂತುಕೊಳ್ಳುವುದಕ್ಕೂ ಸಹ ಇವತ್ತಿನ ದಿವಸ ಖಂಡಿತ ನನ್ನ ಕೈಯಿಂದ ಆಗುತ್ತಿಲ್ಲ. ವೈಯಕ್ತಿಕವಾಗಿ ನನ್ನದೇ ಹೇಳುವುದಾದರೆ ಸುಮಾರು 6-7 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆ ಹಾಕಿದ್ದೇನೆ. ನಾನು ಆ ನನ್ನ ಕಥೆಯನ್ನು ಮುಂದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ನಾನೂ ಸಹ ರೇಷ್ಮೆ ಗಿಡ ಕಿತ್ತುಹಾಕಿ ಬಾಳೆಗಿಡ ಹಾಕಿದ್ದೇನೆ.

ಶ್ರೀ ಸಿ.ಭೈರೇಗೌಡ: ನೋಡಿ, ಸ್ವಾಮಿ, ಅದು ಈಗ ನಡೆಯುತ್ತಿದೆ. ಬಾಳೆ ಗಿಡ ಹಾಕಿದರೆ ಬಾಳೆ ಹಣ್ಣು, ಬಾಳೆಕಾಯಿಗೆ ಕೂಡ ದರ ಇಲ್ಲ. ಆಲೂಗೆಡ್ಡೆ ಹಾಕಿದರೆ ಆಲೂಗಡ್ಡೆಗೂ ಸಹ ದರ ಇಲ್ಲ. ಬೇರೆ ಏನು ಬೆಳೆ ಬೆಳೆದರೂ ಕೂಡ ಇವತ್ತಿನ ದಿವಸ ದರ ಇಲ್ಲ. ಈ ಕರ್ಮ, ಗ್ರಹಚಾರ ಇವುಗಳ ಬಗ್ಗೆ ಖಂಡಿತ ನನಗಂತೂ ನಂಬಿಕೆ ಇಲ್ಲ. ಆದರೂ ಸಹ ಒಂದೊಂದು ಸಂದರ್ಭದಲ್ಲಿ, ಏನಪ್ಪಾ, ನಮ್ಮ ಹಿಂದಿನವರು ಯಾರೋ ಮಾಡಿದಂಥ ಕರ್ಮವನ್ನು ನಾವು ಅನುಭವಿಸುತ್ತಾ ಇದ್ದೇವೋ, ಏನೋ ಎನ್ನತಕ್ಕಂಥ ಪರಿಸ್ಥಿತಿಗೆ ಇವತ್ತಿನ ದಿವಸ ನಾವು ಬಂದಿದ್ದೇವೆ. ರೇಷ್ಮೆ ಬೆಳೆಯನ್ನು ಉಳಿಸತಕ್ಕಂಥದ್ದಕ್ಕೆ ಏನು ಮಾಡುತ್ತೀರಿ ಎನ್ನತಕ್ಕಂಥದ್ದಕ್ಕೆ ಈ ಮಾಮೂಲಿ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಕೊಡಬೇಡಿ. ಇದಕ್ಕೆ ಏನು ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು. ಏಕೆಂದರೆ ನಾಳೆ ಒಂದು ದಿವಸ ಮಾತ್ರ ಸದನ ನಡೆಯುವುದಕ್ಕೆ ಅವಕಾಶ ಇರತಕ್ಕಂಥದ್ದು. ನಾಳೆ ಕಳೆದ ಮೇಲೆ ಪುನಃ ತಾವು ಸದನವನ್ನು ಯಾವಾಗ ಕರೆಯುತ್ತೀರಿ ಏನು ಕಥೆಯೋ ಗೊತ್ತಿಲ್ಲ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮುಂದಿನ ಅಧಿವೇಶನವನ್ನು ಫೆಬ್ರವರಿ 17ನೇ ತಾರೀಖು ಕರೆಯುತ್ತೇವೆ.

ಶ್ರೀ ಸಿ.ಭೈರೇಗೌಡ: ಫೆಬ್ರವರಿ 17ನೇ ತಾರೀಖು ಎಂದರೆ ಅಷ್ಟರ ತನಕ ರೈತರ ಪರಿಸ್ಥಿತಿ ಏನಾಗಬೇಕು ಸ್ವಾಮಿ?

ಶ್ರೀ ಎಸ್.ಎಂ.ಕೃಷ್ಣ :- ಹಾಗಲ್ಲ ಅಧಿವೇಶವನ್ನು ಯಾವಾಗ ಕರೆಯುತ್ತೀರೋ ಏನೋ ಗೊತ್ತಿಲ್ಲ ಅಂದ್ರಲ್ಲಾ ಅದಕ್ಕೆ ಸ್ಪಷ್ಟವಾಗಲಿ ಎಂದು ಹೇಳಿದೆ ಅಷ್ಟೆ.

ಶ್ರೀ ಸಿ.ಬೈರೇಗೌಡ: ಫೆಬ್ರವರಿ 17ನೇ ತಾರೀಖು ತಾವು ಏನು ಸದನ ಕರೆಯುತ್ತೀರಿ ಅದನ್ನು ಕರೆಯಿರಿ. ಆದರೆ ಅಲ್ಲಿಯವರೆವಿಗೂ ಕೂಡ ರೈತರ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ದಯವಿಟ್ಟು ಗಮನಿಸಿ, ಸದನದಲ್ಲಿಯೇ ಪ್ರಸ್ತಾಪ ಆಗಬೇಕೆಂದೇನಿಲ್ಲ, ಸರ್ಕಾರದಿಂದ ನಿರ್ದಿಷ್ಟವಾದಂಥ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಅವಶ್ಯಕತೆಯಿದೆ. ಅದನ್ನು ಏನು ಮಾಡುತ್ತೀರಿ ಎನ್ನತಕ್ಕಂಥದ್ದನ್ನು, ನಾನು ವಿವರವಾಗಿ ಇದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸ್ವಾಮಿ, ನಾನು ತಮ್ಮೆಲ್ಲರನ್ನು ಸಹ ಭೇಟಿಯಾಗಿ ರಾಜ್ಯದಲ್ಲಿರತಕ್ಕಂಥ ವಿದ್ಯುತ್ ಪರಿಸ್ಥಿತಿ ಬಗ್ಗೆ ತಾವು ಸಭೆಯನ್ನು ಕರೆಯುತ್ತೇವೆಂದು ಹೇಳಿದ್ದಿರಿ. ನೀವು ಕೆಲವು ಕಡೆ ಎಂಟು ಗಂಟೆ ವಿದ್ಯುತ್ ಕೊಡುತ್ತೇವೆ, ಇನ್ನು ಕೆಲವು ಕಡೆ ಆರು ಗಂಟೆ ವಿದ್ಯುತ್ ಕೊಡುತ್ತೇವೆಂದು ಏನು ಹೇಳಿದ್ದಿರಿ ಅದು ಎರಡು ಗಂಟೆಗೆ ಇಳಿದಿದೆ. ಈ ಮಧ್ಯೆ 2 ಗಂಟೆ ಸಹ ಕರೆಂಟ್ ಹೋಗಿ ರತಕ್ಕಂಥದ್ದು ವಿಪರೀತ ಆಗಿದೆ ರೈತರು ಬದುಕುವ ಹಾಗಿಲ್ಲ ಬೆಳೆದಿದ್ದ ಉತ್ಪನ್ನದ ಬೆಲೆ ಆ ರೀತಿ ಆದರೆ, ಬೆಳೆಯಬೇಕೆಂದು ಆಸೆ ಇಟ್ಟುಕೊಂಡು ಪ್ರಯತ್ನ ಪಡತಕ್ಕಂಥವರ ಪರಿಸ್ಥಿತಿ ಅಂತೂ ಅವರು ಬದುಕುವ ಹಾಗೆಯೇ ಇಲ್ಲ. ರೈತರೆಲ್ಲಾ ನಿರ್ನಾಮ ಆಗುತ್ತಿದ್ದಾರೆ. ಈ ವಿದ್ಯುತ್ ಮತ್ತು ರೇಷ್ಮೆ ಬೆಳೆ ಇವರೆಡರ ಜೊತೆಗೆ ಬೇರೆ ಬೇರೆ ಉತ್ಪನ್ನಗಳು ಅದು ಹಣ್ಣು ಇರಬಹುದು, ತರಕಾರಿ ಇರಬಹುದು. ನಮ್ಮ ರಾಜ್ಯದಲ್ಲಿ ಬೆಳೆಯತಕ್ಕಂಥ ಕಾಫಿ ಇರಬಹುದು, ತೆಂಗು ಇರಬಹುದು, ಅಡಿಕೆ ಇರಬಹುದು, ಇದರೆಲ್ಲರ ಬೆಲೆ ಕೂಡ ಏನಾಗಿದೆ ಎನ್ನತಕ್ಕಂಥದ್ದರ ಬಗ್ಗೆ ತಾವು ದಯವಿಟ್ಟು ಚಿಂತನೆ ಮಾಡಬೇಕು ಮತ್ತು ಈ ವಿದ್ಯುತ್ ಪರಿಸ್ಥಿತಿಯನ್ನು ಸುಧಾರಿಸತಕ್ಕಂಥದ್ದಕ್ಕೆ ಸಭೆ ಕರೆಯುತ್ತೇವೆ ಎನ್ನುವ ಆಶ್ವಾಸನೆಯನ್ನು ನನಗೆ ತಾವು ಕೊಟ್ಟಿದ್ದಿರಿ, ಗುಜರಾತ್ ಚುನಾವಣೆ ಆದ ತಕ್ಷಣ ಕರೆಯುತ್ತೇನೆಂದು ಹೇಳಿದ್ದೀರಿ. ತಾವು ಗುಜರಾತ್‌ಗೆ ಹೋಗಿ ಬಂದಿರಿ, ಆದರೆ ಆ ಸಭೆ ಮಾತ್ರ ಇಲ್ಲಿಯವರೆಗೆ ಆಗಲಿಲ್ಲ. ಈ ಸಭೆಯನ್ನು ಹೇಗಾದರೂ ಮಾಡಿ ಆದಷ್ಟು ಬೇಗ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಬಿ.ಜೆ.ಪಿ ಸದಸ್ಯರನ್ನು ಹೊರಗಡೆ ಹಾಕಿದ್ದ ದಿವಸವೇ ಹೇಳಿದ್ದೆ. ಅದೇನೆಂದರೆ, ಕರೆದು ಅವರ ಜೊತೆಯಲ್ಲಿ ಮಾತನಾಡಬೇಕೆಂದು ಹೇಳಿದ್ದೆ. ಅವರನ್ನು ಕರೆದು ಮಾತನಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದಿರಿ, ಅವರ ಜೊತೆ ಕರೆದು ಮಾತನಾಡಿದ್ದೀರೋ ಇಲ್ಲವೋ ನಮಗಂತೂ ಕೂಡ ಗೊತ್ತಾಗಿಲ್ಲ. ಸದನ ನಡೆಯುವುದು ನಾಳೆ ಒಂದು ದಿವಸ. ನಾಳೆ ಒಂದು ದಿವಸದ ಮಟ್ಟಿಗಾದರೂ ಸಹ ಬಿ.ಜೆ.ಪಿ.ಯವರು ಈ ಸದನದ ಕಲಾಪದಲ್ಲಿ ಭಾಗವಹಿಸತಕ್ಕಂಥದ್ದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು ಎನ್ನತಕ್ಕಂಥ ಮನವಿಯನ್ನು ಮಾಡುತ್ತೇನೆ. ಅವರು ಸದನದ ಹೊರಗಡೆ ಪತ್ರಿಕೆಗಳಲ್ಲಿ ಏನೇನೋ ಹೇಳಿಕೊಂಡಿದ್ದಾರೆ. ಈ ಸದನದ ಮೂಲಕ ಇನ್ನೂ ಒಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೂ ಕೂಡ ತಾವು ಅವರನ್ನು ಕರೆದು ಮಾತನಾಡಬೇಕು ಎನ್ನತಕ್ಕಂಥ ಮನವಿಯನ್ನು ತಮ್ಮಲ್ಲಿ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಆಯಿತು, ಈಗ ಮುಂದಿನ ಕಾರ್ಯಕಲಾಪ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಒಂದ್ನಿಮಿಷ, ಈ ವಿದ್ಯುತ್, ರೇಷ್ಮೆ ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ಎನ್ನತಕ್ಕಂಥ ಉತ್ತರ ಬೇಕು.

+ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):- ರೇಷ್ಮೆ ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವ ಬೆಳೆಯಾಗಿದೆ. ರೇಷ್ಮೆ ಬೆಳೆಯುವವರಿಗೆ ಬೆಲೆಗಳು ಬಿದ್ದುಹೋಗಿ ಬಹಳ ತೊಂದರೆಯಾಗಿದೆ ಎನ್ನುವುದನ್ನು ಕೋಲಾರದಿಂದ ಬಂದ ಒಂದು ನಿಯೋಗ ನಮ್ಮ ಜೊತೆಯಲ್ಲಿ ಈಗಾಗಲೇ ಚರ್ಚಿಸಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಏನು ಮಾಡಬೇಕು, ಏಕೆಂದರೆ, ನಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಬೆಂಬಲ ಬೆಲೆ ಚೌಕಟ್ಟನ್ನು ಕೆಲವು ತಿಂಗಳುಗಳ ಮಟ್ಟಿಗೆ ತಯಾರಿಸಿದ್ದೆವು ಆಗ ಬಂದಿದ್ದ ಕುತ್ತನ್ನು ಪರಿಹರಿಸಲಿಕ್ಕೆ ಸ್ವಲ್ಪಮಟ್ಟಿಗೆ ಸಹಾಯವಾಯಿತೆಂದು ನಾನು ಭಾವಿಸಿದ್ದೇನೆ. ಈಗ ಮತ್ತೆ ಅದೇ ರೀತಿಯ ಒಂದು ಪರಿಸ್ಥಿತಿ ಉಲ್ಬಣಾವಸ್ಥೆಯನ್ನು ಮೀರಿದೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ಅದಕ್ಕೆ ಸಂಬಂಧಪಟ್ಟಹಾಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು, ಆ ಭಾಗದಿಂದ ಬಂದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾವೇನು ಮಾಡಬಹುದು, ಕೇಂದ್ರ ಸರ್ಕಾರ ಏನು ಮಾಡಬಹುದು, ಇಬ್ಬರೂ ಒಟ್ಟಿಗೆ ಸೇರಿ ಏನು ಮಾಡಬಹುದು ಎನ್ನುವ ಬಗ್ಗೆ ನಾವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿದ್ಯುಚ್ಛಕ್ತಿ ಈಗಾಗಲೇ ಎರಡನೇ ವರ್ಷ ಬರ ಹಾಗೆ ಅನ್ನತಕ್ಕಂಥದ್ದು ಗೊತ್ತು. ನಮ್ಮದು ಬಹುತೇಕ ಹೈಡೆಲ್ ಪವರ್ ಮೇಲೆ ಡಿಪೆಂಡ್ ಆಗಿರುವ ರಾಜ್ಯ. ಈ ಹೈಡೆಲ್ ಪವರ್ ಯಾವ ಪ್ರಮಾಣದಲ್ಲಿ ಉತ್ಪಾದನೆಯಾಗಬೇಕಾಗಿತ್ತು. ಆ ಪ್ರಮಾಣದಲ್ಲಿ ಉತ್ಪಾದನೆಯಾಗಲಿಲ್ಲ. ಅದನ್ನು ಭರ್ತಿ ಮಾಡುವುದಕ್ಕೋಸ್ಕರ ನಾವು ಮಿಕ್ಕ ಕಡೆಯಿಂದ ಪವರ್ ಅನ್ನು ಕೊಂಡುಕೊಳ್ಳಬೇಕಾಗುತ್ತದೆ. ಕೊಂಡುಕೊಳ್ಳಲು ತೀರ್ಮಾನಿಸಿದ್ದೇವೆ. ಕೊಂಡಂಥ ಪವರ್ ಅನ್ನು ವಿತರಣೆ ಮಾಡಬೇಕಾಗಿರುವುದು ಅಗತ್ಯವಾಗಿದೆ. ಇದರ ಬಗ್ಗೆ ವಿಸ್ತೃತ ಚರ್ಚೆಯನ್ನು ನಡೆಸಲು ನಾನು ಜನವರಿ 9ನೇ ತಾರೀಖು ಒಂದು ಸಭೆಯನ್ನು ಕರೆಯುತ್ತೇನೆ. ಆ ಸಭೆಯಲ್ಲಿ ನಾವು, ನೀವು ಒಟ್ಟಿಗೆ ಸೇರಿ ಚರ್ಚಿಸಬಹುದು. ಮುಂದಿನ ತಿಂಗಳು ಬಹಳ ಕಠಿಣವಾದ ದಿವಸಗಳು ಹಾಗೆಂದು ಹೇಳಬಹುದು. ನಿಮ್ಮ ಅನುಭವದ ಹಿಂದೆ 1997-98ರಲ್ಲಿ ಏನು ಪರಿಸ್ಥಿತಿ ಬಂದಿತ್ತು, ಅದೇ ಪರಿಸ್ಥಿತಿ, ಇನ್ನೂ ಉತ್ಕಟವಾದ ಪರಿಸ್ಥಿತಿ ಬರಲಿಕ್ಕೆ ಸಾಧ್ಯವಿದೆ. ಆದ್ದರಿಂದ ನಾವು, ನೀವು ಸೇರಿ ಅದರ ಬಗ್ಗೆ ಸಮಾಲೋಚನೆಗಳನ್ನು ಮುಂದುವರೆಸೋಣ.

ಅಧ್ಯಕ್ಷರು: ಬೈರೇಗೌಡರೆ, 27ನೇ ತಾರೀಖು ನಮ್ಮ ಜಿಲ್ಲೆಯ ಎಲ್ಲಾ ಶಾಸಕರೂ ಬಂದಿದ್ದರು. ಮಾನ್ಯ ಮಂತ್ರಿಗಳು, ಇಂಧನ ಮಂತ್ರಿಗಳು, ಕೆಇಬಿ ಛೇರ್ಮನ್ ಎಲ್ಲರೂ ಬಂದು ಅನೇಕ ವಿಷಯಗಳನ್ನು ತೀರ್ಮಾನ ಮಾಡಿದ್ದೇವೆ. ಸಾಲ್ವ್ ಆಗಿದೆ. ಕೋಲಾರ ಜಿಲ್ಲೆಯಲ್ಲಿ ಜನವರಿ 1 ರಿಂದ ಜೂನ್ ಕೊನೆಯವರೆಗೆ ತಾವು ಆ ದಿನದ ಸಭೆಗೆ ಬಂದಿರಲಿಲ್ಲ.

ಶ್ರೀ ಕರಡಿ ಸಂಗಣ್ಣ: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸ್ವಲ್ಪ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಚೆನ್ನಾಗಿರುತ್ತದೆ. ನೀವು ನಾಲ್ಕು ಕಂಪನಿಗಳನ್ನು ಮಾಡಿದ್ದೀರಿ, ನಮ್ಮಗುಲ್ಬರ್ಗಾದಲ್ಲಿ ಏನೂ ನಡೆಯುತ್ತಿಲ್ಲ. ಮೆಟೀರಿಯಲ್ಸ್ ಇಲ್ಲ. ಲೋಡ್ ಷೆಡ್ಡಿಂಗ್ ನಾಲ್ಕು ಹವರ್ಸ್‌ಗೆ ತಂದಿದ್ದಾರೆ. ಅದಕ್ಕೆ ತಾವು ಚರ್ಚೆಗೆ ಅನುವು ಮಾಡಿಕೊಟ್ಟರೆ ನಾವು ಮುಖ್ಯಮಂತ್ರಿಗಳ ಹತ್ತಿರ ಹೇಳಲು ಅನುಕೂಲವಾಗುತ್ತದೆ.

ಅಧ್ಯಕ್ಷರು: ಬೈರೇಗೌಡರೆ, ಮೊನ್ನೆ ತಾವು ಬಂದಿರಲಿಲ್ಲ. ಅನೇಕ ವಿಷಯಗಳನ್ನು ಪ್ರಸ್ತಾಪಿಸಬಹುದಿತ್ತು. ಅವರು ಸರಿಯಾದ ಉತ್ತರ ಕೊಟ್ಟಿದ್ದಾರೆ. ಒರಿಸ್ಸಾದಿಂದ ಬರುವ ಪವರ್ ಅನ್ನು ರಾತ್ರಿ ಹೊತ್ತು 6 ರಿಂದ 8 ಗಂಟೆಯವರೆಗೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ತಾವು ಬಂದಿದ್ದರೆ. ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬಹುದಿತ್ತು. ತಾವು ಬಂದಿರಲಿಲ್ಲ. ಅದೊಂದೇ ಮಿಸ್ಟೇಕ್ ಆಗಿರುವುದು. 9ನೇ ತಾರೀಖು ಸಭೆ ಕರೆದಿದ್ದಾರೆ. ಆಗ ಮಾತನಾಡಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಚರ್ಚೆಗೆ ಇಟ್ಟುಕೊಳ್ಳಿ. ನಮ್ಮಲ್ಲಿ ಕುಡಿಯುವ ನೀರಿಗೂ ಕರೆಂಟ್ ಇಲ್ಲ. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸಿದ್ದೇನೆ. ರೈತರು ಹಣ ತುಂಬಿಲ್ಲವೆಂದು ಆ ರೀತಿಯಾಗಿದೆ. ಕುಡಿಯುವ ನೀರಿನ ಸಮಸ್ಯೆ ಇರುತ್ತದೆ. ಅದರ ಜೊತೆಗೆ ವಿದ್ಯುತ್ ಕಟ್ ಮಾಡಿ ಕುಡಿಯುವ ನೀರೂ ನಿಂತಿದೆ. ಜಿಲ್ಲಾ ಉಸ್ತುವಾರಿ ಸಚಿವರ ಈ ವಿಷಯ ಗಮನಕ್ಕೆ ಬಂದಿದೆ ಅಲ್ಲಿ ಜನರು ಬಂದು ನಿಂತಿದ್ದರು. ಇದು ರಾಜ್ಯದ ಸಮಸ್ಯೆ ಇದೆ. ಈ ಕಾರಣದಿಂದ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು: ನೋಡೋಣ. ನಾಳೆ ಮಧ್ಯಾಹ್ನದೊಳಗೆ ಸಮಯ ಸಿಕ್ಕರೆ ಅವಕಾಶ ಕೊಡುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ನಾಗಪ್ಪನವರ ಹತ್ಯೆಯಾದ ವಿಷಯದಲ್ಲಿ ಚರ್ಚಿಸಲು ಸದಸ್ಯರಿಗೆ ಟೈಂ ಲಿಮಿಟ್ ಹಾಕಿ. ಒಬ್ಬ ಸದಸ್ಯರು ಒಂದೂವರೆ ಎರಡು ಗಂಟೆ ಮಾತನಾಡಿದರೆ, ನಾವೆಲ್ಲಾ ಹೇಗೆ ಮಾತನಾಡಬೇಕು?

ಅಧ್ಯಕ್ಷರು: ಶ್ರೀಮಾನ್ ಗುರುಸ್ವಾಮಿಯವರೆ, ಒಂದು ಗಂಟೆ, ಒಂದೂವರೆ ಗಂಟೆ ಮಾತನಾಡಿದ್ದಾರೆ.

ಶ್ರೀ ಗುಂಡಪ್ಪ ವಕೀಲ್: ಅವರ ಜಿಲ್ಲೆಗೆ ಸಂಬಂಧಪಟ್ಟಿದ್ದು ಇರಲಿ, ನಮಗೇನೂ ಸಂಬಂಧಪಟ್ಟಿಲ್ಲವೇ? ಇದು ಎಲ್ಲರಿಗೂ ಸಂಬಂಧಪಟ್ಟಿದ್ದು.

ಅಧ್ಯಕ್ಷರು: ಗುರುಸ್ವಾಮಿಯವರೆ, ಆ ತಾಲ್ಲೂಕಿನಿಂದ ಬರುತ್ತೀರಿ, ತಮಗೆ ಹೆಚ್ಚು ಸಮಯ ಬೇಕು. ಇಂಟರಪ್ಷನ್ ಅಲ್ಲದೆ. ತಾವೇ ಒಂದು ಗಂಟೆ 25 ನಿಮಿಷ ಮಾತನಾಡಿದ್ದೀರಿ. ಗುರುಸ್ವಾಮಿಯವರೆ, ತಮಗೆ 10 ನಿಮಿಷ ಸಮಯ ಕೊಡುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಸಮವಾದ ಕಡಿವಾಣ ಹಾಕಿ.

ಅಧ್ಯಕ್ಷರು: ಒಂದ ಗಂಟೆನಲವತ್ತೈದು ನಿಮಿಷ ನಿಮ್ಮೊಬ್ಬರದೇ ಆಗಿದೆ.

ಶ್ರೀ ಸಿ.ಗುರುಸ್ವಾಮಿ: ಡಿಸ್ಕಷನ್ ಶುರುವಾಯಿತು ಅಧ್ಯಕ್ಷರೆ.

ಅಧ್ಯಕ್ಷರು: ಇಂಟರಪ್ಷನ್ ತೆಗೆದ ಮೇಲೆ ನೀವು ಮಾಡಿರುವ ಭಾಷಣ ಈಗಾಗಲೇ ಒಂದೂವರೆ ಗಂಟೆ ಆಗಿರುವುದು. ಇನ್ನು 3 ನಿಯಮ 69ರ ಮೇರೆಗೆ 10 ನಿಮಿಷ ಅಷ್ಟೇ ಕೊಡುತ್ತೇನೆ.

3. ನಿಯಮ 69ರ ಮೇರೆಗೆ

ವಿಷಯ:- ಮಾಜಿ ಸಚಿವರಾದ ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ.

+ಶ್ರೀ ಸಿ.ಗುರುಸ್ವಾಮಿ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಕಳೆದ ವಾರ ನಾಗಪ್ಪನವರ ಹತ್ಯೆ ಮತ್ತು ಅದರ ಬಗ್ಗೆ ಸಿಬಿಐ ತನಿಖೆಗೆ ಏಕೆ ಒತ್ತಾಯಿಸಬಾರದೆಂಬ ಕಾರಣಗಳ ಬಗ್ಗೆ ನಾನು